ಎಚ್.ಎಲ್. ತಿಮ್ಮೇಗೌಡ.—ಒಂದು ಒಂದು ಸರ್ವೆಯನ್ನು ನಾವು ಇನ್ನೂ ಮಾಡಿಲ್ಲ. ಮಾಡಿಸುವ ಯೋಜನೆ ಮಾಡಲಾಗುವುದು.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ, ಹಳ್ಳಿಗಾಡಿನ ಮಕ್ಕಳು ಸಂದರ್ಶನಕ್ಕೆ ಬಂದಾಗ, 10 ಅಂಕಿಗಳನ್ನು ಸೇರಿಸತಕ್ಕ ವ್ಯವಸ್ಥೆ ಮಾಡುತ್ತೀರಾ ? ತಾವು ಹೇಳಿದಂತಹ ವಿಚಾರ ಈಗಾಗಲೇ ರಿಕಾರ್ಡಿಗೆ ಹೋಗಿದೆ. ಕೃಷಿ ಕಾಲೇಜಿನಲ್ಲಿ ರೈತರ ಮಕ್ಕಳು ಸಂದರ್ಶನಕ್ಕೆ ಬಂದಾಗ, 10 ಅಂಕಿಗಳನ್ನು ವೈಟೇಜ್ ಕೊಡತಕ್ಕ ವ್ಯವಸ್ಥೆ ಇದೆ. ನಾಳೆ, ಇದರ ಬಗ್ಗೆ ತೀರ್ಮಾನ ಮಾಡುವ ಮೊದಲು, ವಿರೋಧಪಕ್ಷದ ನಾಯಕರೊಂದಿಗೆ ಸಮಾಲೋಚನೆ ಮಾಡಿ, ಈ ವರ್ಷವೇ ವೈಟೇಜ್ ಕೊಡತಕ್ಕಂತಹ ನಿರ್ಣಯ ಮಾಡುತ್ತೀರಾ ?

ಡಾ. ಹೆಚ್. ಎಲ್. ತಿಮ್ಮೇಗೌಡ.—ಕಳೆದ ವರ್ಷ 50 ಸೀಟುಗಳನ್ನು ಇಟ್ಟಾಗ, ಕೋರ್ಟಿಗೆ ಹೋಗಿದ್ದರು. ಕೋರ್ಟಿನಲ್ಲಿ ಅದನ್ನು ಹೊಡೆದುಹಾಕಿದರು. ವೈಟೇಜ್ ಕೊಡುವ ವಿಚಾರದಲ್ಲಿ ತಮ್ಮ ಜೊತೆಗೆ ಸಮಾಲೋಚನೆ ಮಾಡಿ, ತೀರ್ಮಾನಿಸುತ್ತೇವೆ.

ವಿಷಯ.—ರಾಜ್ಯದಲ್ಲಿ ನಡೆದ ಕೊಲೆಗಳು

ಪ್ರ. ಸಂಖ್ಯೆ 103 (273) ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಗೃಹ ಸಚಿವರು ದಯೆಯಿಟ್ಟು ಉತ್ತರಿಸುವರೆ ?

ಅ) ಕರ್ನಾಟಕದಲ್ಲಿ 1980ರ ನಂತರ ನಡೆದ ಕೊಲೆಗಳ ಸಂಖ್ಯೆ ಎಷ್ಟು ಹಾಗೂ ಅವುಗಳಿಗೆ ಕಾರಣಗಳೇನು. (ವಿವರವಾದ ಮಾಹಿತಿಯನ್ನು ಒದಗಿಸುವುದು) ;

ಆ) ಬೆಳಗಾವಿ ಜಿಲ್ಲೆಯಲ್ಲಿ 1980ರ ನಂತರ ಯಾವ ತಾಲ್ಲೂಕಿನಲ್ಲಿ ಹೆಚ್ಚಿಗೆ ಕೊಲೆ ನಡೆದಿರುತ್ತದೆ. ಹಾಗೂ ಕೊಲೆಗಳ ಸಂಖ್ಯೆ ಎಷ್ಟು ;

ಇ) ಕೊಲೆಗಳನ್ನು ತಡೆಹಿಡಿಯುವುದರಲ್ಲಿ ಸರಕಾರಿ ಯತ್ರನೀಯ ವಿಫಲತೆಯೇ ಏನಾದರೂ ಇದ್ದುದ್ದು ಸರಕಾರದವರ ಗಮನಕ್ಕೆ ಬಂದಿದೆಯೆ ;

ಈ) ಪೊಲೀಸ್ ಇಲಾಖೆಯ ವಿಫಲತೆಯಿಂದ ಆದಂತಹ ಕೊಲೆಗಳಲ್ಲಿ ನಿಲಂಬಿತ ಮಾಡಿದ ಪೊಲೀಸ್ ಅಧಿಕಾರಿಗಳ ಸಂಖ್ಯೆ ಎಷ್ಟು ;

ಉ) ಹೆಚ್ಚಿಗೆ ಕೊಲೆ ನಡೆದಂತಹ ಸಂದರ್ಭದಲ್ಲಿ ನೊಂದ ಕುಟುಂಬಗಳಿಗೆ ನೇರವಾಗಿ ಕಾಯ್ದೆಯ ಹಾಗೂ ಆರ್ಥಿಕ ಸಹಾಯ ನೀಡಲು ಸರಕಾರದ ಕಾರ್ಯಕ್ರಮವೇನು ;

ಶ್ರೀ ಬಿ. ರಾಚಯ್ಯ (ಮಾನ್ಯ ಗೃಹ ಸಚಿವರು).—

ಅ) 5,287 (1-1-80 ರಿಂದ 30-6-85ರ ವರೆಗೆ) ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಸೂಚಿಸಿದೆ.

ಈ ಕೊಲೆಗಳಿಗೆ ಮುಖ್ಯವಾದ ಕಾರಣಗಳು ಈ ಕೆಳಕಂಡಂತಿವೆ.

1. ಜಮೀನು ವ್ಯಾಜ್ಯ
2. ಅನೈತಿಕ ಸಂಬಂಧ
3. ಲಾಭಕ್ಕಾಗಿ
4. ಆಕಸ್ಮಿಕ ಉದ್ರೇಕ
5. ವರದಕ್ಷಿಣೆಗಾಗಿ
6. ಕುಟುಂಬ ವಿವಾದ
7. ಗಲಭೆಗಳು
8. ಕೋಮುಪರ ಮತ್ತು ವಿರುದ್ಧ ಗುಂಪುಗಳ ಘರ್ಷಣೆ.
9. ಆಸ್ತಿ ವಿವಾದ
10. ತಾಂತ್ರಿಕ ಕೊಲೆಗಳು
11. ಜನರನ್ನು ಬಚ್ಚಿಡುವುದು ಇತ್ಯಾದಿಗಳು.

ಆ) ಗೋಕಾಕ್ ತಾಲ್ಲೂಕಿನಲ್ಲಿ. ಅಲ್ಲಿ ಈ ಅವಧಿಯಲ್ಲಿ 105 ಕೊಲೆಗಳು ನಡೆದಿವೆ. (1-1-80 ರಿಂದ 30-6-85ರ ವರೆಗೆ)

ಇ) ಇಲ್ಲ

ಈ) ಪೊಲೀಸ್ ಇಲಾಖೆಯ ವಿಫಲತೆಯಿಂದ ಯಾವ ಕೊಲೆಯೂ ಆಗಿಲ್ಲ.

ಉ) ಎಲ್ಲ ಕೊಲೆ ಮೊಕದ್ದಮೆಗಳಲ್ಲಿ ಆಪರಾಧಿಗಳ ವಿರುದ್ಧವಾದ ಮಾಡುವ ಜವಾಬ್ದಾರಿ ಸರ್ಕಾರದ್ದು. ಕೊಲೆ ನಡೆದ ಸಂದರ್ಭದಲ್ಲ ನೊಂದ ಕುಟುಂಬಗಳಿಗೆ ಆರ್ಥಿಕ ಸಹಾಯ ಕೊಡಲು ಕಾನೂನಿನಲ್ಲಿ ಅವಕಾಶವಿಲ್ಲ.

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	1980	1981	1982	1983	1984	1985 ಜೂನ್ ವರೆಗೆ	ಒಟ್ಟು
1.	ಬೆಂಗಳೂರು ನಗರ	81	65	65	68	84	45	408
2.	ಬೆಂಗಳೂರು ಜಿಲ್ಲೆ	43	61	44	54	59	27	288
3.	ತುಮಕೂರು	56	44	30	48	45	29	252
4.	ಕೋಲಾರ	30	39	42	29	36	25	201
5.	ಕೆ.ಜಿ.ಎಫ್.	3	8	8	10	7	7	43
6.	ಮೈಸೂರು	31	40	47	47	56	40	261
7.	ಮಂಡ್ಯ	25	31	26	30	40	20	172
8.	ಹಾಸನ	28	31	32	39	45	22	197
9.	ಕೊಡಗು	23	19	24	29	28	5	128
10.	ಶಿವಮೊಗ್ಗ	37	30	33	35	34	25	195
11.	ಬಳ್ಳಾರಿ	32	29	19	42	44	24	191
12.	ಚಿತ್ರದುರ್ಗ	30	45	36	47	50	51	229
13.	ದಕ್ಷಿಣ ಕನ್ನಡ	34	31	36	24	29	24	188
14.	ಚಿಕ್ಕಮಗಳೂರು	23	21	19	17	17	17	114
15.	ಉತ್ತರ ಕನ್ನಡ	19	19	13	20	16	8	95
16.	ಬೆಳಗಾವಿ	96	98	118	132	128	48	620
17.	ಬಿಜಾಪುರ	80	90	76	73	107	30	456
18.	ಧಾರವಾಡ	73	82	64	64	84	48	415
19.	ಗುಲ್ಬರ್ಗಾ	47	52	50	50	71	23	293
20.	ಬೀದರ್	19	33	38	32	29	8	159
21.	ರಾಯಚೂರು	72	62	66	56	71	38	365
22.	ರೈಲ್ವೇ	3	3	—	3	5	3	17
	ಒಟ್ಟು	885	933	886	949	1096	538	5287

ಶ್ರೀ ಮಲ್ಲಾರಿಗೌಡ ಎನ್. ಪಾಟೀಲ್.—ಉಪ ಪ್ರಶ್ನೆಗೆ ಮಾನ್ಯ ಮಂತ್ರಿಯವರು ಉತ್ತರ ಕೊಡುತ್ತಾ, ಜವಾಬ್ದಾರಿಯನ್ನು ಅಧಿಕಾರಿಗಳು ತಾನೇ ವಹಿಸಿಕೊಳ್ಳುತ್ತಾರೆಂದು ಹೇಳಿದ್ದಾರೆ. ಎಷ್ಟೋ ಮೊಖದ್ದಮೆಗಳಲ್ಲಿ ಸರಕಾರಿ ಅಧಿಕಾರಿಗಳು ವೇಳೆಗೆ ಸರಿಯಾಗಿ ಹೊಂಗಿ, ಸರ್ಕಾರದ ಪರವಾಗಿ ಹೇಳಿಕೆಯನ್ನು ಕೊಡುತ್ತಿಲ್ಲ. ಕೊಲೆ ನಡೆದಂತಹ ವಿಷಯದಲ್ಲಿಯೂ ಕೂಡ. ಸಾಕ್ಷಿದಾರರು ಮುಂದೆ ಬರುತ್ತಿಲ್ಲ ಇದಕ್ಕೆ ಸರ್ಕಾರದವರು ಏನು ಕ್ರಮ ತೆಗೆದುಕೊಳ್ಳುತ್ತಾರೆ ?

ಶ್ರೀ ಬಿ. ರಾಚಯ್ಯ.—ನನ್ನ ಗಮನಕ್ಕೆ ಬಂದರೆ, ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಮಲ್ಲಾರಿಗೌಡ ಎನ್. ಪಾಟೀಲ್.—ನಮ್ಮ ಕಡೆ ಹತ್ತು—ಹತ್ತು ಕೊಲೆಗಳು ನಡೆದಿವೆ. ಕೊಲೆಯಾದಂತಹ ಕುಟುಂಬಗಳಿಗೆ ಹಣಕಾಸಿನ ಸಹಾಯವನ್ನು ಕೊಡುವುದಕ್ಕೆ ಆಗುವುದಿಲ್ಲವೇ ?

ಶ್ರೀ ಬಿ. ರಾಚಯ್ಯ.—ಕಾನೂನಿನ ಪ್ರಕಾರ, ಅಂತಹ ಸಂದರ್ಭಗಳಲ್ಲಿ ಪರಿಹಾರ ಕೊಡತಕ್ಕ ನೀತಿ ಇಲ್ಲಿಯವರೆಗೂ ಇಲ್ಲ. ಅದರೆ, ಕೆಲವೊಂದು ಸಂದರ್ಭಗಳಲ್ಲಿ ಮಾನ್ಯಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಕೆಲವು ಸಲ ಪರಿಹಾರ ಕೊಟ್ಟಿದೆ. ದಿನಾಂಕ 1-1-85ರಂದು ನಡೆದ ಕೊಲೆ ಪ್ರಕರಣಕ್ಕೆ ಪರಿಹಾರ ಕೊಡಲಾಗಿದೆ.

ಶ್ರೀ ಮಲ್ಲಾರಿಗೌಡ ಎನ್. ಪಾಟೀಲ್.—ಎಷ್ಟು ಜನ ಹಿಂದುಳಿದ ಸಮಾಜದವರಿಗೆ ಮಾನ್ಯ ಮಂತ್ರಿಗಳ ಪರಿಹಾರನಿಧಿಯಿಂದ ಧನಸಹಾಯವನ್ನು ಕೊಡಲಾಗಿದೆ, ಎಂಬ ವಿವರಗಳನ್ನು ಕೊಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಮಾನ್ಯ ಸದಸ್ಯರಿಗೆ ಆ ವಿವರಗಳನ್ನು ತರಿಸಿಕೊಡುತ್ತೇನೆ.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿಯಿತು.

ದಿನದ ಪಟ್ಟಿಯಲ್ಲಿ ಸೇರಿಸಿವೆದ ಪ್ರಶ್ನೋತಗಳ ಪಟ್ಟಿ

ವಿಷಯ.—ಆರೋಗ್ಯ ಕಾರ್ಯಕರ್ತರ ಹುದ್ದೆಗೆ ಸಂದರ್ಶನ

ಪ್ರ. ಸಂಖ್ಯೆ 101 (314) ಶ್ರೀ ಆರ್. ಎನ್. ನಾಯ್ಕ (ಭಟಕಳ) ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ 1984ನೇ ಸಾಲಿನಲ್ಲಿ ಆರೋಗ್ಯ ಕಾರ್ಯಕರ್ತರ ಹುದ್ದೆಗೆ ಸಂದರ್ಶನ ನಡೆಸಲಾಯಿತೆ ;

ಆ) ಹಾಗಿಲ್ಲದಿದ್ದಲ್ಲಿ ಸದರಿ ಫಲಿತಾಂಶವನ್ನು ಸಾರ್ವಜನಿಕವಾಗಿ ಪ್ರಕಟಿಸಲಾಗಿದೆಯೆ ;

ಇ) ಹಾಗಿದ್ದಲ್ಲಿ ; ಅದಕ್ಕೆ ಕಾರಣವೇನು ; ಹಾಗೂ ಅದನ್ನು ಯಾವಾಗ ಪ್ರಕಟಿಸಲಾಗುವುದು ?

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಸಚಿವರು).—

ಅ) ಹೌದು

ಆ) ಹೌದು

ಇ) ಉದ್ಭವಿಸುವುದಿಲ್ಲ.

ವಿಷಯ : ಬೀದರ್ ಜಿಲ್ಲೆಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸುವುದು

ಪ್ರ. ಸಂಖ್ಯೆ 102 (303) ಶ್ರೀ ಬಸವರಾಜ ಪಾಟೀಲ (ಮುಮ್ನಾಬಾದ್).—ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಬೀದರ್ ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳಲ್ಲಿ ಸರ್ಕಾರವು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸಿದೆಯೆ ? ಹಾಗಿದ್ದಲ್ಲಿ ಅವುಗಳ ಸಂಖ್ಯೆ ಎಷ್ಟು ಮತ್ತು ಎಲ್ಲೆಲ್ಲಿ ಪ್ರಾರಂಭಿಸಲಾಗಿದೆ?

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮಂತ್ರಿಗಳು). —

ಅ) 1983-84ನೇ ಜಾಲಿನಲ್ಲಿ ಬಸವಕಲ್ಯಾಣ ತಾಲ್ಲೂಕಿನಲ್ಲಿರುವ ಉಜಲಾಂಬ ಎಂಬ ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರವು ಮಂಜೂರಾಗಿದೆ. 1984-85ನೇ ಸಾಲಿನಲ್ಲಿ ಬೀದರ್ ಜಿಲ್ಲೆಗೆ ಪ್ರಾಥಮಿಕ ಆರೋಗ್ಯ ಕೇಂದ್ರವು ಮಂಜೂರಾಗಿರುವುದಿಲ್ಲ.

ವಿಷಯ : ರಾಜ್ಯದಲ್ಲಿ ನಡೆದ ಕೊಲೆಗಳು.

ಪ್ರ. ಸಂಖ್ಯೆ 103 (273) ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಗೃಹಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಕರ್ನಾಟಕದಲ್ಲಿ 1980ರ ನಂತರ ನಡೆದ ಕೂಲಿಗಳ ಸಂಖ್ಯೆ ಎಷ್ಟು ಹಾಗೂ ಅವುಗಳಿಗೆ ಕಾರಣಗಳೇನು. (ವಿವರವಾದ ಮಾಹಿತಿಯನ್ನು ಒದಗಿಸುವುದು) ;

ಆ) ಬೆಳಗಾವಿ ಜಿಲ್ಲೆಯಲ್ಲಿ 1980ರ ನಂತರ ಯಾವ ತಾಲ್ಲೂಕಿನಲ್ಲಿ ಹೆಚ್ಚಿಗೆ ಕೂಲಿ ನಡೆದಿರುತ್ತದೆ. ಹಾಗೂ ಕೊಲೆಗಳ ಸಂಖ್ಯೆ ಎಷ್ಟು.

ಇ) ಕೊಲೆಗಳನ್ನು ತಡೆಹಿಡಿಯುವುದರಲ್ಲಿ ಸರ್ಕಾರಿ ಯಂತ್ರನೀಯ ವಿಫಲತೆಯೇ ಏನಾದರೂ ಇದ್ದುದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೆ.

ಈ) ಪೊಲೀಸ್ ಇಲಾಖೆಯ ವಿಫಲತೆಯಿಂದ ಆದಂತಹ ಕೊಲೆಗಳಲ್ಲಿ ನಿಲಂಬಿತ ಮಾಡಿದ ಪೊಲೀಸ್ ಅಧಿಕಾರಿಗಳ ಸಂಖ್ಯೆ ವಿಷ್ಟು.

ಉ) ಹೆಚ್ಚಿಗೆ ಕೊಲೆ ನಡೆದಂತಹ ಸಂದರ್ಭದಲ್ಲಿ ನೊಂದ ಕುಟುಂಬಗಳಿಗೆ ನೇರವಾಗಿ ಕಾಯ್ದೆಯ ಹಾಗೂ ಆರ್ಥಿಕ ಸಹಾಯ ನೀಡಲು ಸರ್ಕಾರದ ಕಾರ್ಯಕ್ರಮವೇನು.

ಶ್ರೀ ಬಿ. ರಾಚಯ್ಯ (ಗೃಹಸಚಿವರು).—

ಅ) 5,287 (1-1-80ರಿಂದ 30-6-85ರವರೆಗೆ) ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಸೂಚಿಸಿದೆ.